Regd No B G 155

11—10—1965

ಸತ್ಯವಾದಿ

49th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿಂದ ಸುಬ್ರಹ್ಮಣ್ಯೇಶ್ವರಾಚಾರ್ ಎಂ ಎ ಸುಬ್ಬರಾಯರು

ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ಭಾರತದ ಪರವಾಗಿ ನಾಸೇರರ ನಿಲುವು

★

ಅ ಳು ವು ದು
ಆರೋಗ್ಯಕ್ಕೆ ಹಿಳ್ಳೆಯದು !

★

ಕೆಲವು ವೈಜ್ಞಾನಿಕರು ಜಾಗರೂಕತೆಯ ಸಂಶೋಧನೆಯಿಂದ, ಕಣ್ಣೀರು ಅನೇಕ ಖಾಯಿಲೆಗಳನ್ನು ತೊಡೆದುಹಾಕಬಲ್ಲುದೆಂದು ಕಂಡುಹಿಡಿದಿದ್ದಾರೆ

ಮನಸ್ಸಿಗೆ ಧಕ್ಕೆಯಾಗಲೀ ವ್ಯಸನವಾಗಲೀ ಆದಾಗ ತುಂಬಾ ಕಣ್ಣೀರಿನಿಂದ ಕೂಡಿದ ಅಳುವು ಅವನ್ನು ಹೆಚ್ಚಾಗಿ ತೊಡೆದುಹಾಕಿ ಮನಸ್ಸಿಗೆ ಶಾಂತಿ ತರುತ್ತದೆ; ಜರ್ಮನಿಯ ಪ್ಲಟಗಾರ್ಟಿನ ವೈಜ್ಞಾನಿಕರು, ರೋಗಗಳ ನಿವಾರಣೆಗೆ ಅಳುವುದನ್ನು ದೃಢಪಡಿಸಿರುತ್ತಾರೆ.

‡ ಈ ವಿಜ್ಞಾನಿಗಳ ಹೇಳಿಕೆ ಎಷ್ಟರ ಮಟ್ಟಿಗೆ ಸರಿಯಾಗಿದೆಯೋ ನಾವು ಹೇಳಲಾರೆವು ; ಆದರೆ ಅವರು ಸಾರಕಷ್ಟು ಸಾಕ್ಷ್ಯವಿಲ್ಲದೇಯೇ ಅವರ ಪೂರ್ವಾಪರಿಯಂದು ತಕ್ಷ್ಯ ಸ್ಥಾಪಿಸುತ್ತಾರೆಂದು ನಮ್ಮ ಅಭಿಪ್ರಾಯವು ವಿಜ್ಞಾನದ ವಿಷಯದಲ್ಲಿ ಒಂದು ನಿರ್ಧಾರಕ್ಕೆ ಎಂದೆಂದಿಗೂ ಅಂಟಿಕೊಂಡಿರಲು ಸಾಧ್ಯವಿಲ್ಲ. ಆದರೆ ಹಿಂದೂಧರ್ಮವು ಬೇರೆ ರೀತಿಯದಾಗಿದ್ದು ಅದರ ಒಂದು ಸತ್ಯವು ಎಂದೆಂದಿಗೂ ಹೀಗೇ ಇರುತ್ತದೆ, ಎಂದಿಗೂ ಒಧಲಾವಣೆಗೊಳ್ಳುವುದಿಲ್ಲ ಅಥವಾ ಳಂದುಲ್ಲ ; ಇದೇ ವಿಜ್ಞಾನಕ್ಕೂ ಹಿಂದೂ ಧರ್ಮಕ್ಕೂ ಇರುವ ವೈತ್ಯಾಸವು.

— Truth

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನಿ ವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾದಕ್ಷ, ಜ್ಯೋತಿರ್ವಿದ್ಯಾನಿಧಿ
ಸಂದಕೃಷ್ಣಜೋಯಿ ಸಂಪಾದಿಂದ

12 ಮಂಗಳವಾರ ಬಿದಿಗೆ ಅಶ್ವಿನಿ

★

ವೇಯುರಂ ಅಭಿಪ್ರಾಯ

ಬೆಂಗಳೂರು— ವಿದ್ಯುಚ್ಛಕ್ತಿ ಟ್ಯಾರಿಫ್ ಕುರಿತ ಚರ್ಚಾ ಸಭೆಯಲ್ಲಿ ಕಾರ್ಪೊರೇಷನ್ ಮೇಯರ್ ಶ್ರೀ ಕೆ ಎಂ ನಾಗಣ್ಣನವರು ವಿದ್ಯುಚ್ಛಕ್ತಿ ದರ ಕಡಮೆಯಾಗಬೇಕೆಂದು ತಿಳಿಸಿದರು.

❀

ಪಾಕಿಸ್ತಾನಕ್ಕೆ ಬೇಕಂತೆ

ವಾಷಿಂಗ್ಟನ್— ಪಾಕಿಸ್ತಾನವು ಹೆಚ್ಚು ಅಮೇರಿಕಾ ಜಟ್ ವಿಮಾನಗಳನ್ನು ಮತ್ತು ಪಾರ್ಟ್‌ಗಳಿಗಾಗಿ ಕೇಳಿಕೆ ಒಡ್ಡಿರುವುದೆಂದೂ ಆದರೆ ಅಮೇರಿಕಾ ಅನುಕೂಲಿಸುವ ಸಂಭವವಿಲ್ಲವೆಂದೂ ಹೇಳಲಾಗಿದೆ

★

ಅದ್ಯಾಕೊ

ನವದೆಹಲಿ— ಪಶ್ಚಿಮ ಮತ್ತು ಪೂರ್ವ ಪಾಕಿಸ್ತಾನದಲ್ಲಿ ಭಾರತ ಗಡಿಯುದ್ದಕ್ಕೂ ರೈಲ್ವೆ ಲೈನುಗಳನ್ನು ತೆಗೆದ ಹಾಕಲಾಗುತ್ತಿದೆಯೆಂದು ನಂದಿಯಾಗಿದೆ

❀

ಪಾಕಿಸ್ತಾನಕ್ಕೆ ನಷ್ಟ

ಜಯಪುರ— ಪಾಕಿಸ್ತಾನ ವಿಮಾನ ಪಡೆಯಲ್ಲಿ ಅರ್ಧದಷ್ಟು ನಷ್ಟವಾಗಿದೆಯೆಂದು ಏರ್ ಮಾರ್ಷಲ್ ಅರ್ಜುನ್ ಸಿಂಗ್ ಹೇಳಿದ್ದಾರೆ

●

ರೋಸಿಯದಲ್ಲಿ

ಲಂಡನ್— ಬ್ರಿಟನ್ನಿನೊಡನೆ ಮಾತುಕತೆ ವಿಫಲವಾಗಿದ್ದರಿಂದ ರೊಡ್ಡೇಷಿಯವು ಬ್ರಿಟನ್ನಿನಿಂದ ಸ್ವತಂತ್ರಗೊಂಡಿದೆ ಎಂದು ಘೋಷಿಸುವುದಾಗಿ ರೊಡ್ಡೇಷಿಯ ಮುಖ್ಯ ಮಂತ್ರಿ ಜಾರ್ಜ್ ಸ್ಮಿತ್ ಹೇಳಿದ್ದಾರೆ.

★

ರಕ್ತದಲ್ಲಿ ಸಹಿಮಾಡಿದ ಪತ್ರ

ನವದೆಹಲಿ— ಪ್ರಧಾನಿ ಶಾಸ್ತ್ರಿಗಳು ರಾಷ್ಟ್ರೀಯ ರಕ್ಷಣಾ ನಿಧಿಗೆಂದು ಸುಮಾರು ಒಂದು ಕೋಟಿ ರೂಗಳಷ್ಟನ್ನು ಸ್ವೀಕರಿಸಿದ್ದಾರೆ — ಪ್ರಧಾನಿಗಳಿಗೆ ಪ್ರತಿನಿತ್ಯವೂ ಸುಮಾರು ೫ಸ್ರವ.ವನ್ನು ಶಾಘಿಸುತ್ತಾರೆಂಬ ಪತ್ರಗಳೂ ತಂತಿಗಳೂ ಬರುತ್ತಿವೆ — ಪಂಜಾಬಿನ ನಾಂಗ್ರೂಲು ಜಿಲ್ಲೆಯ ಎಂಟು ಜನ ಶಾಲಾ ಮಕ್ಕಳು ತಮ್ಮ ರಕ್ತದಲ್ಲಿ ಸಹಿಮಾಡಿದ ಪತ್ರವೊಂದನ್ನು ಪ್ರಧಾನಿಗಳಿಗೆ ಬರೆದಿದ್ದಾರೆ

❀

ವಿಧ್ವಸ್ಥಿಕೆ

ಬೊಕೊರಾಸ್ಟ್ರ— ಚೀನಾದೊಡನೆ ಭಾರತದ ವ್ಯಾಜ್ಯ ಪ್ರವಸ್ಥೆಗೆ ರೊಮೇನಿಯಾ ವಿಧ್ವಸ್ಥಿಕೆ ವಹಿಸಲು ಸಿದ್ಧವಿರುವುದಾಗಿ ಭಾರತಕ್ಕೆ ತಿಳಿಸಿದೆ

★

ಉದಾತ್ತ ಸಹಾಯ

ನವದೆಹಲಿ— ಕಾಶ್ಮೀರದಲ್ಲಿ ಮನೆ ಮತ್ತು ಕಳೆದುಕೊಂಡ ಜನರು ಉಪಯೋಗಕ್ಕೆಂದು ಭಾರತೀಯ ಗೃಹಲಕ್ಷ್ಮಿ ಸಮಾಜವು 274 ಹೊಸ ಒಟ್ಟೆಗಳು, 675 ಹಳೇಒಟ್ಟೆಗಳು, 210 ಟವಲುಗಳು, 200 ಸೋಪುಗಳು, 55 ಹೆಣಿಗೆಗಳು ಮತ್ತು 95 ಪುಸ್ತಕಗಳನ್ನು ಸಹಾ ಕೊಟ್ಟಿದೆ

———

ಅಹಾ !

ನವದೆಹಲಿ— ಭಾರತವು ಅಹಾರ ವಿಷಯದಲ್ಲಿ ಸ್ವಾವಲಂಬನೆ ಸಾಧಿಸಲು ಪಂಚವಾರ್ಷಿಕ ಯೋಜನೆಯಲ್ಲಿ ಸಾಕಷ್ಟು ವ್ಯವಸ್ಥೆಯಾಗಿದೆಯೆಂದು ಕೃಷಿ ಸಚಿವರು ಹೇಳಿದ್ದಾರೆ.

ಕೈರೊ— ಭಾರತಾಧ್ಯಕ್ಷ ರಾಧಾಕೃಷ್ಣನ್‌ರೊಡನೆ ಅಡಿದ ಸಾಕಾರತೆಯುಳ್ಳ ಕಾಶ್ಮೀರದ ಸಮಸ್ಯೆಯಲ್ಲಿ ಭಾರತದ ಪರವಾಗಿ ಸಂಯುಕ್ತ ಅರಬ್ ಬೆಂಬಲವನ್ನು ಪುನಃ ತಿಳಿಸಿದರು.

❀

ಚೀನೀಯರ ಗೋಳು

ನವದೆಹಲಿ— ಲಡಕ್ ಮತ್ತು ಸಿಕಿಂ ಗಡಿಯಲ್ಲಿ ಬೆದರಿಕೆ ಉಂಟುಮಾಡಿರುವ ಚೀನವು ಚೀನಾ-ಭಾರತ ಗಡಿ ಮಧ್ಯೆ ಸೈನ್ಯರಿಗೂ ವಿಸ್ತರಿಸಿದೆ

❀

ಪೂರ್ವ ಪಾಕಿಸ್ತಾನದಲ್ಲಿ

ಕಲ್ಕತ್ತ— ಪಾಕಿಸ್ತಾನದ ಪೂರ್ವ ಭಾಗದಲ್ಲಿ ಅಯೂಬರ ವಿರುದ್ಧದ ಜಟಿ ವಟಿಕೆ ಬಲಗೊಳ್ಳುತ್ತಿದೆ : ಅದನ್ನು ಪ್ರತ್ಯೇಕ ರಾಜ್ಯ ಮಾಡಿಕೊಳ್ಳಲು ಒಂದು ಕ್ರಾಂತಿ ಸಂಸ್ಥೆ ಬೆದರಿಕೆ ಹಾಕಿದೆ

o o

ಅತಿಕ್ರಮಿಗಳ ಕೊಲೆ

ನವದೆಹಲಿ— ಜಮ್ಮು ಕಾಶ್ಮೀರ ವಿವಿಧ ಸೆಕ್ಟರುಗಳಲ್ಲಿ ಅತಿಕ್ರಮಿಸಿ ಬಂದವರಲ್ಲಿ 15 ಮಂದಿ ಕೊಲ್ಲಲ್ಪಟ್ಟರು

o o

ಬಂಧನ

ಶ್ರೀನಗರ— ಪ್ಲಬಿಸೈಟು ರಂಗದ ಪ್ರಮುಖರು ಬಂಧಿಸಲ್ಪಟ್ಟಿದ್ದಾರೆ

—

ನೇರಾವರಿ ಸೌಲಭ್ಯ

ಮೈಸೂರು ರಾಜ್ಯದಲ್ಲಿ ಒಂದು ಅಲ್ಪ ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಸರ್ಕಾರ ಯೋಜಿಸಿದೆ

ಮೈಸೂರು ಸಾರ್ವಜನಿಕ ಪುಸ್ತಕಭಂಡಾರದಲ್ಲಿ

ಗಾಂಧಿ ಜಯಂತಿ ಪ್ರಯುಕ್ತ ತಾ|| 12-10-65 ನೇ ಮಂಗಳವಾರ ಸಾಯಂಕಾಲ 5-30 ಗಂಟೆಗೆ ಮೈಸೂರು ಶ್ರೀ ರಂ.ಕೃಷ್ಣಶಾಸ್ತ್ರಿಯವರ ಸ್ವಾಮಿ ಸೋದರನ ಥಾನಂದವರು 'ಗಾಂಧೀಜಿಯವರ ಸಂದೇಶ' ಎಂಬ ವಿಷಯವಾಗಿ ಭಾಷಣ ಮಾಡಲು ಒಪ್ಪಿರುತ್ತಾರೆ : ಸಾರ್ವಜನಿಕ ಪುಸ್ತಕಭಂಡಾರದ ಅಧ್ಯಕ್ಷರಾದ ಶ್ರೀ ಬಿ ಎಸ್ ಕೆಂಗೇಗೌಡ ಬಿ ಎ, ಬಿ ಎಲ್ ಅವರು ಅಧ್ಯಕ್ಷತೆ ವಹಿಸುವರು : ಸರ್ವರಿಗೂ ಸ್ವಾಗತ [ವಿ ಸೂ- 'ಗಾಂಧೀ ಸಾಹಿತ್ಯ ಪ್ರದರ್ಶನ' 13-10-65 ರಿಂದ 20-10-65 ರವರೆಗೆ : ಬೆಳಿಗ್ಗೆ 9 ರಿಂದ 12 ಗಂಟೆಯವರೆಗೆ]

ಂ ಂ

ಮತದಾರರ ಪಟ್ಟಿ

ಮೈಸೂರು— ರಾಜ್ಯದ ವಿಧಾನಸಭೆಯಿಂದಲಿ ಮತ್ತು ಲೋಕಸಭೆಗಳ ಮುಂದಿನ ಸಾರ್ವತ್ರಿಕ ಚುನಾವಣೆ 1967 ನೇ ಇಸ್ವಿ ಫೆಬ್ರವರಿ ತಿಂಗಳಲ್ಲೋ ಆಥವಾ ಮಾರ್ಚ್ ತಿಂಗಳಲ್ಲೋ ನಡೆಯುವುದಾಗಿರುತ್ತೆ : ಇದರ ಅಂಗವಾಗಿ ಪುನರಾಂ ಪಟ್ಟಿಯನ್ನು ಈ ವರ್ಷದ ಅಖೈರಿನೊಳಗಾಗಿ ತಯಾರಿಸಬೇಕಾಗಿರುತ್ತೆ; ಇದಲ್ಲದೆ ಸಲುವಾಗಿ ಪ್ರಾಂತಭೆಯ ಅಧಿಕಾರಿಗಳು ಅವರಿಗೆ ನೇರವಿದ ಪ್ರದೇಶಗಳಲ್ಲೆಲ್ಲ ಪ ನೆನುನೆಗೂ ಹೋಗಿ ವಿಶೇಷವಾಗಿ ಪಟ್ಟಿಯನ್ನು ತಯಾ ನವ ಬಗ್ಗೆ ವಿಚಾರಣೆ ಮಾಡಿರುತ್ತೆ ; ಮೈಸೂರಿನ ನಾಗರೀಕರು ಈ ಕೆಲಸದಲ್ಲಿ ಪೂರ್ತಿ ಸಹಕಾರ ನೀಡಬೇಕಾಗಿ ಪಾರ್ಥಿಸಿದೆ— ಎಂದು ಮುನಿಸಿಪಲ್ ಕಮಿಷನರ್ ಶ್ರೀ ಜಿ ಟಿ ವಿಶ್ವನಾಥ್ ರವರು ಪ್ರಕಟಣೆ ಹೊರಡಿಸಿದ್ದಾರೆ.

ಂ ಂ

ಸಾಮೂಹಿಕ ಪ್ರಾರ್ಥನಾ ಯೋಜನೆ

ಬೆಂಗಳೂರಿನ ಶ್ರೀ ಐ ಎಂ ಕಾರ್ಯಪ್ಪನವರು ಕೊಡಿಸಿರುವ ದೀರ್ಘವಾದ ಪತ್ರವೊಂದರಲ್ಲಿ, ರಾಷ್ಟ್ರೀಯ ಐಕ್ಯತೆ ಮತ್ತು ಸಂಘಟನೆಗೆ ಸಹಾಯಕವಾಗಿ ರಂತೆ, ದೇಶಾದ್ಯಂತ ಪ್ರತಿ ಶನಿವಾರ ಬೆಳಿಗ್ಗೆ 8 ಗಂಟೆಗೆ ಸರಿಯಾಗಿ ಸಾರ್ವಜನಿಕ ಪ್ರಾರ್ಥನಾ ಸಭೆಗಳನ್ನು ನಡೆಸಬೇಕೆಂದೂ ಅಲ್ಲಿ 'ರಘುಪತಿ ರಾಘವ' ಹಾಡುವುದು, ಭಗವದ್ಗೀತೆಯ ಶ್ಲೋಕ ಪಠಿಸುವುದು, ಮಂಗಳಗೀತೆ ಹಾಡುವುದು, ಕಡೆಯಲ್ಲಿ 'ರಾಷ್ಟ್ರಗೀತೆಯೊಡನೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಬೇಕೆಂದೂ ತಿಳಿಸಿದ್ದಾರೆ; ಈ ರೀತಿ ಸಾಮೂಹಿಕ ಪ್ರಾರ್ಥನಾ ಸಭೆಗಳನ್ನು ಯಶಸ್ವಿಯಾಗಿ ನಡೆಸುವುದರಲ್ಲಿ ಭಾರತೀಯರು ಮುಂದಾಗಲೆಂದು ಅವರು ಭಗವಂತನ ಕೃಪೆ ಮತ್ತು ಎಲ್ಲರ ಸಹಾಯವನ್ನೂ ಯಾಚಿಸಿದ್ದಾರೆ

—0—

ನಾಳೆ ಶ್ರೀಚಾಮುಂಡಿಬೆಟ್ಟದಲ್ಲಿ ಶೈಲೋತ್ಸವ ಪ್ರಯುಕ್ತ

ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

ವುಡಲ್ಯಾಂಡ್ಸ್ ಜನಪ್ರಿಯ 3 ನೇ ವಾರ

ಆವೊ ಪ್ಯಾರ್ ಕರೆ (ಹಿಂದಿ)

Aao Pyar Karen

ಜಾಕುಲ್ ಮುಖರ್ಜಿ — ಸೈರಾ ಬಾನು ರವರ ಕಲಾತ್ಮಕ ನಟನೆಯ

ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ

ಪ್ರತಿದಿನ 3 ಪ್ರದರ್ಶನಗಳು

ಅಪೆರ— ಅಮೋಘ 2 ನೇ ವಾರ

ಪ್ರತಿಜ್ಞಾ ಪಾಲನ (ತೆಲುಗು)

ಪಾತ್ರ— ಕಾಂತಾರಾವ್, ರಾಜನಾಲ, ಪದ್ಮನಾಭಂ, ರಾಜಶ್ರೀ, ವಿಜಯಲಕ್ಷ್ಮಿ

[ದಿನ 3 ಆಟಗಳು]

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮತ್ತು ವ್ಯಾಪಾರದಲ್ಲಿ ಕಾರ್ಯಗಳೂ ಹೆಚ್ಚಾಗಿ ನಡೆಯಲಿ

Help The Gorakshana

ಗೋಸಂರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋಸಂರಕ್ಷಣೆ ಪ್ರಾಣದಯೆ, ತಾಯಿಹಾಲು, ಪಶುವೈದ್ಯ ವಿಚಾರಗಳಿಂದ ಕೂಡಿದ ವಿಶೇಷ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದ 50 ನೈಸೆ

ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 : (ಜೀವ: ಸಾರವಾಕ್ಯ)

ಗೋಸಂರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಕ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋಸಂರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

Edited, Printed & Published by Dharma pracharanirata M S Krishna Rao (Proprietor) at the Satyavadi Press Chamarajapuram, Mysore 4